**(ಇಂದು ದಿಃ 19-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 6 ನೇ ಪ್ರತಿವಾದಿ ರವರ ಪರ ಶ್ರೀ.NR ವಕೀಲರಿಂದಃ-**

ನನ್ನ ತಂದೆ ಹೆಸರಿನಲ್‌ಲಿ 2 ಜಮೀನುಗಳು ಇದ್ದವುಕಿ ಎಂದರೆ ಸರಿ. ಒಂದೇ ಸರ್ವೇ ನಂಬರಲ್ಲಿ ಎರಡು ತುಕಡಿ ಜಮೀನು ಇದ್ದವು ಎಂದರೆ ಸರಿ. ಸದರಿ ಸಂಗತಿ ಈ ದಾವೆ ಸಲ್ಲಿಸುವಾಗ ನನಗೆ ಗೊತ್ತಿತ್ತು. ನಾನು ಈ ದಾವೆಯನ್ನು , ನನ್ನ ತಂದೆ ಈ ಹಿಂದೆ 6 ನೇ ಪ್ರತಿವಾದಿಗೆ ಮಾರಾಟ ಮಾಡಿದ ಜಮೀನಿಗೆ ಮಾತ್ರ ಹಾಕಿದ್ದೇ ಎಂದರೆ ಸರಿ. ನನ್ನ ತಂದೆ ಇನ್ನೊಂದು 3 ಎಕರೆ ಜಮೀನಿನ್ನು ಒಬ್ಬ ಬಸವರಾಜ ತಂದೆ ಹನುಮಂತ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸಹಿ ಇಲ್ಲದೆಸದರಿ ಜಮೀನು ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಜಮೀನು ಮಾರಾಟ ಮಾಡಿದ ಸಂಗತಿ ಮಾರಾಟ ಆದ ದಿನದಿಂದ ನನಗೆ ಗೊತ್ತು ಎಂದರೆ ಸರಿ. ಸದರಿ ಜಮೀನು ಮಾರಾಟ ಮಾಡಿ 14 ವರ್ಷ ಆಗಿದೆ ಎಂದರೆ ಸರಿ. 6 ನೇ ಪ್ರತಿವಾದಿ ಪರ ನನ್ನ ತಂದೆ ಅಗ್ರೀಮೆಂಟ ಬರೆದುಕೊಟ್ಟದ್ದರು ಅದರಂತೆ ಖರೀದಿ ಪತ್ರ ಮಾಡಿ ಕೊಡಿ ಎಂದು ನನ್ನ ತಂದೆ ವಿರುದ್ದ 6 ನೇ ಪ್ರತಿವಾದಿ ನಿರ್ದಿಷ್ಟ ಪರಿಹಾರ ಕೋರಿ ದಾವೆ ಸಲಿಲಸಿದ್ದರು , ಸದರಿ ದಾವೆ ರಾಜಿ ಡಿಕ್ರಿ ಆಯಿತು , ಅದರಂತೆ ನನ್ನ ತಂದೆ 6 ನೇ ಪ್ರತಿವಾದಿಗೆ ನಿಗೀದಿತ ಅವಧಿಯೋಳಗೆ ಹಣ ಮರಳಿ ಕೋಡಬೇಕು ಇಲ್ಲ ಖರೀದಿ ಪತ್ರ ಬರೆದು ಕೋಡಬೇಕು ಎಂದು ಆಗಿತ್ತು ಅದರಂತೆ ನನ್ನ ತಂದೆ ಹಣ ಮರಳಿ ಕೋಡ ಕಾರಣಕ್ಕೆ 6 ನೇ ಪ್ರತಿವಾದಿ ಜಾರಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಖರೀದಿ ಪತ್ರ ಆಯಿತು, ನಂತರ ನನ್ನ ತಂದೆ ನನಗೆ ಹೇಳಿ ಸದರಿ ಜಾರಿ ಅರ್ಜಿಯಲ್ಲಿ ಖರೀದಿ ಪತ್ರ ಆಗಬಾರದು ಎಂದು ಈ ದಾವೆ ಸಲ್ಲಿಸಲು ಹೇಳಿದರು ಎಂದರೆ ನನಗೆ ಗೊತ್ತಿಲ್ಲ, ಆ ರೀತಿ ನನ್ನ ತಂದೆ ಹೇಳಿದ್ದರಿಂದ ನಾನು ಮೊದಲು ಮಾರಾಟ ಮಾಡಿದ ಜಮೀನಿಗೆ ಮಾತ್ರ ದಾವೆ ಸಲ್ಲಿಃಸಿದೆ ಇನ್ನೊಂದು ಜಮೀನನ್ನು ದಾವೆಯಿ ಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ, ಈ ದಾವೆಯಲ್ಲಿ 6 ನೇ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ತಿದ್ದು ಪಡಿ ಮಾಡಿಕೊಂಡು ಇನ್ನೊಂದು ಆಸ್ತಿ ಸೇರಿಸಿಕೊಂಡಿದ್ದೇವೆ ಎಂದರೆ ಸರಿ.

OS No.70/2023

PW-1

ನಮ್ಮಕುಟುಂಬದ ಮೂಲ ವ್ಯಕ್ತಿ ಸಾಬಣ್ಣ ಎಂದರೆ ಸರಿ. ಸಾಬಣ್ಣ ರವರಿಗೆ ಇಬ್ಬರು ಮಕ್ಕಳು ಅಂದರೆ ನರಸಪ್ಪ ಮತ್ತು ತಿಪ್ಪಣ್ಣ ಎಂದರೆ ಸರಿ. ನರಸಪ್ಪನಿಗೆ ನನ್ನ ತಂದೆ ಒಬ್ಬನೇ ಮಗ ಎಂದರೆ ಸರಿ. ತಿಪ್ಪಣ್ಣನಿಗೆ ದೂಳಪ್ಪ ಒಬ್ಬನೇ ಮಗ ಎಂದರೆ ಸರಿ.ಸರ್ವೇ ನಂಬರ 109 ರಲ್ಲಿ ಸರ್ವೇ ನಂ. 109/1 ಮತ್ತು ಸರ್ವೇ ನಂ. 109/2 ಎರಡು ತುಕಡಿಗಳು ಇದ್ದವು ಎಂದರೆ ಸರಿ. ಸಾಕ್ಷಿ ಮುಂದುವರೆದು ಬಸವರಾಜನಿಗೆ ಮಾರಾಟ ಮಾಡಿದ್ದು ಸರ್ವೇ ನಂ. 109/3 ಆಯಿತು ಎಂದು ಹೇಳುತ್ತಾರೆ. ಸರ್ವೇ ನಂ.109 ರ ಸಂಬಂಧ ನರಸಪ್ಪ ಮತ್ತು ತಿಪ್ಪಣ್ಣನ ನಡುವೆ ಭಾಗ ಆಗಿತ್ತು, ಅದರಂತೆ 1954 ರಿಂದ ಅವರ ಮಕ್ಕಳ ಹೆಸರಿನಲ್ಲಿ ಪ್ರತ್ಯೇಖ ಪಹಣಿ ಬಂದಿದ್ದವು ಎಂದರೆ ಸರಿ. ಚಂದ್ರಶೇಖರಿಗೆ ಮಾರಾಟ ಮಾಡಿದ ಸರ್ವೇ ನಂಬರ 109/1 ಮುಂಚೆ 1968 ರವರೆಗೆ 109/ಅ ಎಂದು ಇತ್ತು , 1968 ರಲ್ಲಿ ಸರ್ವೇ ನಂ . 109/1 ಆಯಿತು ಎಂದರೆ ನನಗೆ ಗೊತ್ತಿಲ್ಲ, ದೂಳಪ್ಪನ ಹೆಸರಿನಲ್ಲಿ ಮೊದಲು 5 ಎಕರೆ 36 ಗುಂಟೆ ಇತ್ತು ಎಂದರೆ ಸರಿಯಲ್ಲ, 1963 ರಿಂದ 1968 ರ ಅವಧಿಯಲ್ಲಿ ಸರ್ವೇ ಸೇಟ್ಲಮೆಂಟ ಪ್ರಕಾರ ದೂಳಪ್ಪನ 7 ಎಕರೆ 9 ಗುಂಟೆ ಕಬ್ಜಾ ಇದಿದ್ದಕ್ಕೆ ಆತನ ಹೆಸರಿರಗೆ ಪಾರ್ಮ ನಂಬರ 10 ಸರ್ವೇ ನಂ. 109/1 ಎಂದು ಕೋಟ್ಟಿದ್ದರು ಎಂದರೆ ಸರಿಯಲ್ಲ, ನನ್ನತಂದೆ ಹೆಸರಿಗೆ 5 ಎಕರೆ 37 ಗುಂಟೆ ಇತ್ತು ಎಂದರೆ ಸರಿಯಲ್ಲ, ನನ್ನ ತಂದೆ ಹೆಸರಿಗೆ 6 ಎಕರೆ 24 ಗುಂಟೆ ಎಂದು ಹೇಳುತ್ತಾರೆ. 1963 ರಿರಿಂದ 1968 ರವೆರೆಗೆ ಕಾಸ್ರಾ ಪಹಣಗಳಲ್ಲಿ ನನ್ನ ತಂದೆ ಹೆಸರಿಗೆ 5 ಎಕರೆ 37 ಗುಂಟೆ ಜಮೀನು ಇತ್ತು, ರೀ ಸರ್ವೇ ಪ್ರಕಾರ ಆತನ ಕಬ್ಜಾನೋಡಿ 6 ಎಕರೆ 24 ಗುಂಟೆ ದಾಖಾಲತಿ ಆಗಿದೆ ಎಂದರೆ ಸರಿಯಲ್ಲ,

ದೂಳಪ್ಪನಿಗೆ ಮಕ್ಕಳು ಇಲ್ಲ ಎಂದರೆ ಸರಿ. ದೂಳಪ್ಪನಿಗೆ ಮಕ್ಕಳು ಇಲ್ಲದ ಕಾರಣ ಆತನ ಭಾಗದ ಜಮೀನು ಸರ್ವೇ ನಂ.109/1 ರ ಜಮೀನು ಸಾಬಣ್ಣನಿಗೆ ಆಯಿತು ಎಂದರೆ ಸರಿಯಲಲ, ಸಾಕ್ಷಿ ಮುಂದುವೆರದು ನರಸಪ್ಪನಿಗೆ ಆಯಿತು ಎಂದು ಹೇಳುತ್ತಾರೆ. ನರಸಪ್ಪನ ಹಸರಿಗೆ ಯಾವ ವರ್ಷ ಆಗಿತ್ತು ನನಗೆ ಗೊತ್ತಿಲ್ಲ, ನರಸಪ್ಪನ ಹೆಸರಿಗೆ ಯಾವತ್ತು ಪಹಣಿ ಆಗಿರಲಿಲ್ಲ ಎಂದರೆ ಸರಿಯಲ್ಲ, ದೂಳಪ್ಪನ ಭಾಗದ ಜಮೀನು ನನ್ನ ತಂದೆಗೆ ಬಂದಿತ್ತು ಕಾರಣ ನನ್ನ ತಂದೆ ಸದರಿ ಜಮೀನಿನ ಸಂಪೂರ್ಣ ಮಾಲೀಕರಾಗಿದ್ದರು ಅದರಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ, ಸರ್ವೇ ನಂಬರ 19/2 ರಲ್ಲಿ ನನ್ನ ತಂದೆಗೆ ಅವರ

ತಂದೆಯಿಂದ ಬಂದಿದ್ದ ಜಮೀನಿನ ಪೈಕಿ ನನ್ನ ತಂದೆ 3 ಎಕರೆ ಮಾರಾಟ ಮಾಡಿದಾಗ ನಾನು ಅದನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. 6 ನೇ ಪ್ರತಿವಾದಿಗೆ ತೊಂದರೆ ಕೋಡುವ ಸಲುವಾಗಿ ನಾನು ಮತ್ತು ಉಳಿದ ಪ್ರತಿವಾದಿಯರು ಸೇರಿ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ, ನೋಂದಾಯಿತ ಖರೀದಿ ಪತ್ರ ಆದ ನಂತರ 6 ನೇ ಪ್ರತಿವಾದಿ ಕೋರ್ಟ ಮೂಲಕ ದಾವಾ ಐಟೆಮ ನಂಬರ 1 ರ ಕಬ್ಜಾ ಪಡಿದುಕೊಂಡು ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**( 1 ರಿಂದ 5 ನೇ ಪ್ರತಿವಾದಿಯರ ಪರ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**
**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**